ಹೇಳಿ ಮನಸ್ಸನ್ನು ಹಗುರ ಮಾಡಿಕೊಳ್ಳುತ್ತೇನೆ. ಸತ್ವದ ಕೈಕಾಲು ಕಟ್ಟಿ ಮೂಲೆಯಲ್ಲಿ ಕೂರಿಸಿದ್ದು ಸಾಕು, ಜಾಸ್ತಿ ಹೊತ್ತು ಹೊಟ್ಟೆಯಲ್ಲಿಟ್ಟುಕೊಳ್ಳುವುದು ಸರಿಯಲ್ಲ ಎನಿಸಿ ಬದುಕಿನ ಪದರವನ್ನು ಇವಳೆದುರು ಬಿಚ್ಚಿಡಲು ತೀರ್ಮಾನಿಸಿದೆ.

"ಭಾರತದಲ್ಲಿ ಹೆಚ್ಚಿನವರದ್ದು ಅರೇಂಜಡ್ ಮ್ಯಾರೇಜ್. ನಮ್ಮದೂ ಅಷ್ಟೇ. ಮದುವೆಗೆ ಮೊದಲು ನಾನು, ರಿತಿಕ್ ಐದಾರು ತಿಂಗಳು ಸಾಕಷ್ಟು ಓಡಾಡಿ ಒಬ್ಬರನ್ನೊಬ್ಬರು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದೆವು. ಅವನ ಭುಜಕ್ಕೆ ಒರಗಿ, ಕೈ ಹಿಡಿದು ಮಂಗಳೂರಿನ ಸಮುದ್ರ ದಂಡೆಯಲ್ಲಿ ನಡೆದಾಡಿದೆ. ಮರಳಿನ ಮೇಲೆ ನಿಂತು ಭವಿಷ್ಯದ ಸೌಧವನ್ನು ಕಟ್ಟಿದೆವು. ಅವನು ಐಸ್ ಕ್ರೀಮ್ ತಿನ್ನಿಸಿ, ಕೆನ್ನೆಗೆ ಕಿಸ್ ಕೊಟ್ಟಾಗ ಇವನೇ ನನಗೆ ಸರಿಯಾದ ಜೊತೆಗಾರ ಎನಿಸಿತು. ಅವನ ಕಣ್ಣಲ್ಲಿ ಕಣ್ಣಿಟ್ಟು ನೋಡಿದಾಗ ನನ್ನ ಪ್ರತಿಬಿಂಬವನ್ನೇ ಕಂಡೆ. ಎಲ್ಲದಕ್ಕಿಂತ ಅವನು ಹೇಳುತ್ತಿದ್ದ ಕವಿತೆಗಳಿಗೆ ನಾನು ಮಾರು ಹೋದೆ. ಎಲ್ಲವೂ ಸರಿಯಾಗಿದೆ ಎಂದು ಕಣ್ಣು ಮುಚ್ಚಿ ಕನಸು ಕಟ್ಟುತ್ತಿರುವಾಗಲೇ ನಮ್ಮ ಮದುವೆಯಾಯಿತು. ಮೊದಲ ಆರು ತಿಂಗಳು ನಮ್ಮದು ಹನಿಮೂನ್ ಪಿರಿಯೆಡ್..." ಇಷ್ಟು ಹೇಳುತ್ತಿರುವಾಗಲೇ ಶಾಪಿಂಗ್ ಹೋದವರು ಬಂದರು. "ಕಡೆಗೆ ಎಲ್ಲವನ್ನೂ ಹೇಳಿ ಬಿಡು, ಇವತ್ತೇ ಕಡೆಯ ದಿನ, ಮತ್ತೆ ನಾನೆಲ್ಲೋ, ನೀನೆಲ್ಲೋ" ಎಂದಳು.

ಶಾಂಗೈನ ಪ್ರಸಿದ್ಧ ಕಟ್ಟಡ 'ಶಾಂಗೈ ಟವರ್' ಮುಂದೆ ನಿಂತು ಫೋಟೊ ತೆಗೆದುಕೊಳ್ಳದವರು ಇದ್ದಾರೆಯೇ? ಎಲ್ಲರೂ ಅತ್ತ ಹೊರಟರು. ಅತ್ತ ಹೆಜ್ಜೆ ಹಾಕಿದವಳನ್ನು ಶೆರ್ಲಿ ಕೈ ಹಿಡಿದು ಜಗ್ಗಿದಳು. ಇಬ್ಬರೂ ಅಲ್ಲೇ ಕಲ್ಲಿನ ಬೆಂಚಿನ ಮೇಲೆ ಕೂತು ಹಸಿರು ಚಹ ಹೀರತೊಡಗಿದೆವು. 'ಮುಂದುವರಿಸು' ಎನ್ನುವಂತೆ ನನ್ನ ಮುಖ ನೋಡಿದಳು. "ಒಂದು ವರ್ಷ ಕಳೆಯುವುದರೊಳಗೆ ರಿತಿಕನ ನಿಜವಾದ ಬಣ್ಣ ಹೊರಗೆ ಬಂತು. ಮುಖ ತೊಳೆದಾಗ ಮುಖಕ್ಕೆ ಹಚ್ಚಿದ ಬಣ್ಣ ತೊಳೆದು ಹೋಗುವುದಿಲ್ಲವೇ ಹಾಗೆ... ನಮ್ಮ ಸಂಬಂಧದಲ್ಲಿ ಬಿರುಕು ಕಾಣಿಸಿಕೊಂಡಿತು, ನಮ್ಮ ಕನಸಿನ ಸೌಧ ಕುಸಿದು ಬಿತ್ತು. ಎಷ್ಟಾದರೂ ಮರಳಿನ ಮೇಲೆ ನಿಂತು ಕಟ್ಟಿದ್ದಲ್ಲವೇ? ಮೊದಲನೆಯದು ಅವನು ಹೇಳುತ್ತಿದ್ದ ಕವಿತೆಗಳು ಅವನದ್ದಲ್ಲ, ಬೇರೆ ಯಾರೋ ಬರೆದದ್ದು. ಅವನಮ್ಮನೊಡನೆ ಆಗಾಗ ನನಗೆ ಗೊತ್ತಾಗದ ಹಾಗೆ ಫೋನಿನಲ್ಲಿ ಮಾತನಾಡುತ್ತಿರುತ್ತಾನೆ. ಈಗ ಅವನದ್ದು ಒಂದೇ ಹಟ, ಮಗುವಾಗಲಿ, ನಿನ್ನ ಪ್ಲಾನಿಂಗ್ ಸಾಕು ಎನ್ನುತ್ತಿದ್ದಾನೆ. ಅಮ್ಮನದ್ದೇ ಪಿತೂರಿ ಇರಬೇಕು. ಆಫೀಸಿನಲ್ಲಿ ಮ್ಯಾನೇಜರ್ ಪೋಸ್ಟು ಸಿಕ್ಕಿದ ಮೇಲೆಯೇ ನಾನು ಬಸುರಿಯಾಗುವುದು, ಅದಕ್ಕಾಗಿ ಎರಡು ಮೂರು ವರ್ಷ ಕಾಯಬೇಕು ಎಂದು ಮೊದಲೇ ಹೇಳಿದ್ದೆ. ನನಗೆ ನನ್ನ ಕೆರಿಯರ್ ಇಂಪಾರ್ಟೆಂಟ್. ಈಗೀಗ ಅವನು ಸಿಟ್ಟು ಬೇರೆ ಮಾಡಿಕೊಳ್ಳುತ್ತಿದ್ದಾನೆ" ಎಂದೆ. "ಅಯ್ಯೋ ಇಷ್ಟೇನಾ? ಈಗ ಬೇಡದಿದ್ದರೆ ಇನ್ನೊಂದು ಆರು ತಿಂಗಳು ಬಿಟ್ಟು ಬಸುರಿಯಾಗು. ಹೆಚ್ಚು ತಡವಾದರೆ ಮಕ್ಕಳಾಗುವುದು ಕಷ್ಟ. ಮ್ಯಾನೇಜರ್ ಆದ ಮೇಲೆ ಜವಾಬ್ದಾರಿ ಜಾಸ್ತಿ ಇರುತ್ತದೆ, ಅದಕ್ಕೆ ಮೊದಲೇ ಮಕ್ಕಳಾದರೆ ಒಳ್ಳೆಯದು" ಎಂದಳು. ಅವಳನ್ನೇ ವಿಚಿತ್ರವಾಗಿ ನೋಡಿದೆ; ನನ್ನಜ್ಜಿಯ ಪಾಠ ಹೇಳುತ್ತಿದ್ದಾಳೆ ಅನಿಸಿತು. "ಮನೆಯಲ್ಲಿ ಒಂದಲ್ಲ, ಒಂದು ವಿಷಯಕ್ಕೆ ದಿನನಿತ್ಯ ಜಗಳ. ಲಾಯರನ್ನು ನೋಡಿದ್ದೇನೆ, ಡೈವೋರ್ಸಿಗೆ ಪೇಪರ್ ರೆಡಿಯಾಗಿದೆ. ನನ್ನ ಲಾಯರ್ ಈ ವಾರ ಪೇಪರನ್ನು ಕೋರ್ಟಿಗೆ ಸಬ್ಮಿಟ್ ಮಾಡುತ್ತಿದ್ದಾರೆ." "ರಿಷಿಕಾ, ಈಗ ನೀನು ಇವನನ್ನು ಡೈವರ್ಸ್ ಮಾಡಿ ಮತ್ತೊಬ್ಬನನ್ನು ಮದುವೆಯಾದರೂ ಮತ್ತೊಬ್ಬನಲ್ಲಿರುವ ಮತ್ತೇನೋ ಗುಣ ನಿನಗೆ ಇಷ್ಟವಾಗದಿರಬಹುದು." "ಬೇಡ, ಸರಿಯಾದವನು ಸಿಕ್ಕಿದರೆ ಇನ್ನೊಂದು ಮದುವೆಯಾಗುತ್ತೇನೆ, ಇಲ್ಲದಿದ್ದರೆ ಇಲ್ಲ. ಬಲವಂತದ ಹೊರೆಯನ್ನಂತೂ ನಾನು ಹೊರುವುದಿಲ್ಲ" ಎನ್ನುತ್ತಾ ಬಸ್ಸಿನಲ್ಲಿ ಕೂತೆ.

ಅಂದು ಚೀನಾದಲ್ಲಿ ಕೊನೆಯ ದಿನ. ಟೂರಿನವರು ರಾತ್ರಿ ಕ್ಲಬ್ಬಿನಲ್ಲಿ ಪಾರ್ಟಿ ಇಟ್ಟುಕೊಂಡಿದ್ದರು.

